# ಇಳಯರಾಜ ಎತ್ತಿದ ಪ್ರಶ್ನೆ!

ಸಂಗೀತ ನಿರ್ದೇಶಕ ಇಳಯರಾಜ, ಗಾಯಕ ಎಸ್ಪಿ ಬಾಲಸುಬ್ರಹ್ಮಣ್ಯಂ ಅವರಿಗೆ ಕಳುಹಿಸಿಕೊಟ್ಟ ಒಂದೇ ಒಂದು ನೋಟಿಸ್ ಸುದ್ದಿ ಮಾಧ್ಯಮದಲ್ಲಿ ದೊಡ್ಡದೊಂದು ಚರ್ಚೆಗೆ ಮತ್ತೆ ಹೆಬ್ಬಾಗಿಲು ತೆರೆದಿದೆ. ನೋಟಿಸ್‌ನಲ್ಲಿರುವ ಒಕ್ಕಣೆ ಇಷ್ಟೆ– ನಾನು ರಚಿಸಿದ, ಸಂಗೀತ ನೀಡಿದ ಹಾಡುಗಳನ್ನು ನೀವು ನಿಮ್ಮ ಮ್ಯೂಸಿಕಲ್ ನೈಟ್ಸ್ ಕಾರ್ಯಕ್ರಮಗಳಲ್ಲಿ ಅನುಮತಿ ಇಲ್ಲದೆ ಹಾಡಬೇಡಿ. ಹಾಡಿದರೆ ದಂಡ ಕಟ್ಟಬೇಕಾಗುತ್ತದೆ! ಎಸ್ಪಿಬಿ ತಕ್ಷಣ ಇದಕ್ಕೆ ಪ್ರತಿಕ್ರಿಯೆ ನೀಡಿ ಕ್ಷಮೆ ಕೇಳಿದ್ದಾರೆ. ಜತೆಗೆ 'ಅನುಮತಿ ಇಲ್ಲದೆ ಹಾಡುವುದಿಲ್ಲ' ಎಂದೂ ಸ್ಪಷ್ಟನೆ ನೀಡಿದ್ದಾರೆ. ಅಂದ ಹಾಗೆ, ಎಸ್ಪಿಬಿ ಏಪ್ರಿಲ್‌ನಲ್ಲಿ ಅಮೆರಿಕದ ವಿವಿಧ ರಾಜ್ಯಗಳಲ್ಲಿ ಸಂಗೀತ ಸಂಜೆ ಪ್ರವಾಸ ಏರ್ಪಡಿಸಿರುವ ಬೆನ್ನಲ್ಲೆ ಈ ನೋಟಿಸ್ ಜಾರಿಯಾಗಿದೆ. ಈಗ ಸುದ್ದಿ ಮಾಧ್ಯಮದಲ್ಲಿ ಮತ್ತೆ ಮೇಲೆದ್ದಿರುವ ಪ್ರಶ್ನೆಗಳೆಂದರೆ, ಹಾಡುಗಳನ್ನು ಪ್ರಸಾರ ಮಾಡಿದರೆ ಅಥವಾ ಶುಲ್ಕ ಇಟ್ಟು ಸಂಗೀತ ಕಾರ್ಯಕ್ರಮದಲ್ಲಿ ಹಾಡಿದರೆ ಅದರ ಲಾಭಾಂಶ ಯಾರಿಗೆಲ್ಲ ಹೋಗಬೇಕು? ಹಾಗೆ ಹೋಗುತ್ತಿದೆಯೆ? ಇದನ್ನೆಲ್ಲ ಕಾನೂನಾತ್ಮಕ ವಿಷಯವಾಗಿಸಿದರೆ ಸಂಬಂಧಿಸಿದ ಸಂಗೀತ ನಿರ್ದೇಶಕರ ಜನಪ್ರಿಯತೆಗೆ ಕುಂದು ಬರುವುದಿಲ್ಲವೆ? ಎಷ್ಟೋ 'ಎವರ್‌ಗ್ರೀನ್' ಹಾಡುಗಳು ಗಾಯಕರಿಲ್ಲದೆ ಜನಮಾನಸದಿಂದ ಕಣ್ಮರೆ ಆಗುವುದಿಲ್ಲವೆ?

ಚರ್ಚೆ ನಡೆಯುತ್ತಿರಲಿ; ಈ ಸಂದರ್ಭವನ್ನು ಗಮನದಲ್ಲಿ ಇಟ್ಟುಕೊಂಡು ಇಳಯರಾಜ ಅವರ ಜನಪ್ರಿಯತೆ, ಸಂಗೀತ ಸಾಧನೆ ಮತ್ತು ಅನುಪಮ ಅಭಿರುಚಿಯ ಬಗ್ಗೆ ಮಾತನಾಡುವುದು ಒಳ್ಳೆಯದು. 70ರ ದಶಕದಿಂದಲೂ ತಮಿಳು ಸಿನಿಮಾ ಸಂಗೀತ ಕ್ಷೇತ್ರದಲ್ಲಿ ತನ್ನದೇ ಆದ ಪಾರಮ್ಯವೊಂದನ್ನು ಸೃಷ್ಟಿಸಿರುವವರು ಇಳಯರಾಜ. ಅವರನ್ನು ಭಾರತದ ಅತ್ಯಂತ ಶ್ರೇಷ್ಠ ಸಂಗೀತ ನಿರ್ದೇಶಕರಲ್ಲಿ ಒಬ್ಬರು ಎಂದು ನಿಸ್ಸಂಶಯವಾಗಿ ಹೇಳಬಹುದು. ಅವರು ಸಂಗೀತ ಉಪಕರಣಗಳನ್ನು ನುಡಿಸುತ್ತಾರೆ, ಸಂಗೀತ ನಿರ್ವಹಣೆ ಮಾಡುತ್ತಾರೆ, ಸ್ವತಃ ಹಾಡುತ್ತಾರೆ, ಹಾಡುಗಳನ್ನು ಬರೆಯುತ್ತಾರೆ ಮತ್ತು ಸಂಗೀತ ನಿರ್ದೇಶನ ಮಾಡುತ್ತಾರೆ. ಸುಮಾರು 6000ಕ್ಕೂ ಹೆಚ್ಚು ಹಾಡುಗಳನ್ನು ಕಂಪೋಸ್ ಮಾಡಿರುವ ಕೀರ್ತಿ ಅವರದ್ದು. ಒಂದು ಸಾವಿರಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಿದವರು. ಅವರ ಮೂಲ ಹೆಸರಿನಂತೆಯೇ (ಜ್ಞಾನದೇಶಿಕನ್) ಇವರ ಸಂಗೀತ ಜ್ಞಾನ ದೇಶ ವಿದೇಶಗಳಲ್ಲಿ ಲಕ್ಷಾಂತರ ಅಭಿಮಾನಿಗಳನ್ನು ಸೃಷ್ಟಿಸಿದೆ.

ಇಳಯರಾಜ ಅವರ ಸಂಗೀತಶೈಲಿಯ ಬಗ್ಗೆ ಸಾಕಷ್ಟು ಸುದೀರ್ಘ ಚರ್ಚೆ, ಜಿಜ್ಞಾಸೆಗಳೆಲ್ಲ ಆಗಿದೆ. ಈ ತಲೆಮಾರಿನ ಬಹುತೇಕ ಜನಪ್ರಿಯ ಸಂಗೀತ ನಿರ್ದೇಶಕರು ಇಳಯರಾಜ ಅವರ ಸಿನಿಮಾ ಸಂಗೀತದಿಂದ ಕಲಿತುಕೊಂಡದ್ದು ಸಾಕಷ್ಟಿದೆ. ತಮಿಳು ಚಿತ್ರಸಂಗೀತದಲ್ಲಿ ಜಾನಪದವನ್ನು ಹಾಸುಹೊಕ್ಕಾಗಿಸಿದ್ದು; ಜತೆಗೆ ದಕ್ಷಿಣ ಭಾರತದ ಸಿನಿಮಾ ಸಂಗೀತಕ್ಕೆ ಪಾಶ್ಚಾತ್ಯ ಸಂಗೀತ ಸಂವೇದನೆಗಳನ್ನು ಮಿಶ್ರಣ ಮಾಡಿ, ಅದ್ವಿತೀಯ ಸಾಧನೆ ಮೆರೆದವರಲ್ಲಿ ಇಳಯರಾಜ ಮೊದಲಿಗರು.

ಸಿತಾರ್ ಮಾಂತ್ರಿಕ ರವಿಶಂಕರ್ ಅವರನ್ನು ಹೊರತುಪಡಿಸಿದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪಾಶ್ಚಾತ್ಯ ಮತ್ತು ದಕ್ಷಿಣ ಭಾರತದ ಸಂಗೀತವನ್ನು ಸಂಗಮಿಸಿದ ಸಾಮರ್ಥ್ಯಕ್ಕೆ ಇಳಯರಾಜ ಅವರೇ ಮೊದಲಿಗರು. ಲಂಡನ್ನಿನ ಟ್ರಿನಿಟಿ ಕಾಲೇಜ್ ಆಫ್ ಮ್ಯೂಸಿಕ್ ನಿಂದ ಕ್ಲಾಸಿಕಲ್ ಗಿಟಾರ್ ನುಡಿಸುವುದರಲ್ಲಿ ಚಿನ್ನದ ಪದಕ ಪಡೆದವರು ಅವರು. 1993ರಲ್ಲಿ ಲಂಡನ್ನಿನಲ್ಲಿ ರಾಯಲ್ ಫಿಲ್ಹಾರ್ಮೋನಿಕ್ ಆರ್ಕೆಸ್ಟ್ರಾದಿಂದ ಪೂರ್ಣ ಸಿಂಫೋನಿ ನುಡಿಸಿದ ಖ್ಯಾತಿ ಅವರದ್ದು. ಅದಕ್ಕೆಂದೇ ಅವರನ್ನು ಬಹುತೇಕರು 'ಮ್ಯೂಸಿಕಲ್ ಜೀನಿಯಸ್' (ಇಸೈಮಣಿ) ಎಂದೇ ಗುರುತಿಸುತ್ತಾರೆ. ಮೂರು ಬಾರಿ ಅತ್ಯುತ್ತಮ ಸಂಗೀತ ನಿರ್ದೇಶನಕ್ಕೆ ಮತ್ತು ಎರಡು ಬಾರಿ ಅತ್ಯುತ್ತಮ ಹಿನ್ನೆಲೆ ಸಂಗೀತಕ್ಕೆ ರಾಷ್ಟ್ರೀಯ ಪ್ರಶಸ್ತಿ ಪಡೆದದ್ದೂ ದೊಡ್ಡ ಸಾಧನೆಯೇ.

ಧಾರ್ಮಿಕ ಮತ್ತು ವಿಶ್ವಸಂಗೀತದ ಹಲವು ಆಲ್ಬಂಗಳನ್ನೂ ಹೊರತಂದಿರುವ ಇಳಯರಾಜ ಅವರ ಸಂಗೀತಕ್ಕೆ ವಿಶ್ವದಾದ್ಯಂತ ಭಾರೀ ಬೇಡಿಕೆ ಇದೆ. 2003ರಲ್ಲೇ ಬಿಬಿಸಿ ನಡೆಸಿದ ಅಂತರರಾಷ್ಟ್ರೀಯ ಸಮೀಕ್ಷೆಯೊಂದರಲ್ಲಿ 155 ದೇಶಗಳ ಸಂಗೀತ ಅಭಿಮಾನಿಗಳು 'ದಳಪತಿ' ಚಿತ್ರದ 'ರುಕ್ಕಮ್ಮಾ ಕೈಯ ತಟ್ಟು' ಹಾಡನ್ನು ಸಾರ್ವಕಾಲಿಕ ಹತ್ತು ಅತ್ಯುತ್ತಮ ಹಾಡುಗಳಲ್ಲಿ ಒಂದೆಂದು ಗುರುತಿಸಿದ್ದರು. ವಿಶ್ವ ಸಿನಿಮಾದ ಜನಪ್ರಿಯ ಪೋರ್ಟಲ್ 'ಟೇಸ್ಟ್ ಆಫ್ ಸಿನಿಮಾ' ಪ್ರಕಾರ, ಸಿನಿಮಾ ಇತಿಹಾಸದ ಅತ್ಯಂತ ಶ್ರೇಷ್ಠ 25 ಕಂಪೋಸರ್‌ಗಳ ಪೈಕಿ ಇಳಯರಾಜ 9ನೇ ಸ್ಥಾನದಲ್ಲಿದ್ದಾರೆ. 2013ರಲ್ಲಿ ಸಿಎನ್‌ಎನ್–ಐಬಿಎನ್ ಭಾರತೀಯ ಸಿನಿಮಾದ 100ನೇ ವರ್ಷಾಚರಣೆ ಪ್ರಯುಕ್ತ ನಡೆಸಿದ ಸಮೀಕ್ಷೆಯಲ್ಲಿ ಶೇಕಡಾ 49ರಷ್ಟು ಮತಗಳನ್ನು ಪಡೆದು ಇಳಯರಾಜ ಅವರು 'ಭಾರತದ ಅತ್ಯಂತ ಶ್ರೇಷ್ಠ ಸಂಗೀತ ನಿರ್ದೇಶಕ' ಎಂದು ಮನ್ನಣೆ ಪಡೆದಿದ್ದರು.

ಈಗ ಎಸ್‌ಪಿ ಬಾಲಸುಬ್ರಹ್ಮಣ್ಯಂ ಅಮೆರಿಕದಲ್ಲಿ ಕಾರ್ಯಕ್ರಮ ನೀಡುತ್ತಾರೆಂದರೆ, ಅಲ್ಲಿನ ಸಹಸ್ರಾರು ಪ್ರೇಕ್ಷಕರು ಇಳಯರಾಜ ನಿರ್ದೇಶಿಸಿದ ಹಾಡುಗಳನ್ನೇ ಬಯಸುತ್ತಾರೆ ಎನ್ನುವುದು ಖಚಿತ. ಅದಕ್ಕಿಂತ ಹೆಚ್ಚಾಗಿ ಇಳಯರಾಜ ಸಂಗೀತ ನಿರ್ದೇಶನದ ಅತ್ಯಂತ ಹೆಚ್ಚು ಸಿನಿಮಾ ಹಾಡುಗಳನ್ನು ಹಾಡಿದವರ ಪಟ್ಟಿಯಲ್ಲಿ ಎಸ್ಪಿಬಿ ಹೆಸರೇ ಮುಂಚೂಣಿಯಲ್ಲಿದೆ. ಎಸ್ಪಿ, ಎಸ್.ಜಾನಕಿ, ಚೈತ್ರ– ಈ ಮೂವರೂ ಇಳಯರಾಜ ನಿರ್ದೇಶನದಲ್ಲಿ ಹಾಡಿದ ಸಾವಿರಾರು ಜನಪ್ರಿಯ ಮತ್ತು ಶ್ರೇಷ್ಠ ಹಾಡುಗಳಿವೆ. ಹೀಗಿರುವಾಗ ಇಳಯರಾಜ ಅವರ ಸಂಗೀತ ನಿರ್ದೇಶನ ಬಿಟ್ಟು ಎಸ್ಪಿ ಹಾಡಿದರೆ ಸ್ವಾರಸ್ಯವಾದರೂ ಏನು ಉಳಿದೀತು... ಎನ್ನುವುದೀಗ ಅಭಿಮಾನಿಗಳನ್ನು ಕಾಡುವ ಪ್ರಶ್ನೆ.

ಇಲ್ಲಿ ಇನ್ನೂ ಒಂದು ಪ್ರಶ್ನೆ ಕುತೂಹಲಕರ: ಎಸ್ಪಿಬಿ ಗೆ ನೀಡಿರುವ ನೋಟಿಸ್ ಸಹಜವಾಗಿಯೇ ಉಳಿದೆಲ್ಲ ಗಾಯಕರಿಗೂ ಅನ್ವಯವಾಗುತ್ತದೆ. ಭಾರತದ ಬಹುತೇಕ ಗಾಯಕರು ಹಕ್ಕುಸ್ವಾಮ್ಯ ಕಾಯ್ದೆಯ ಬಗ್ಗೆ ಗಂಭೀರವಾಗಿ ಆಲೋಚಿಸಿದವರಲ್ಲ. ಹಕ್ಕುಸ್ವಾಮ್ಯದ ಕಾಯ್ದೆ ಪ್ರಕಾರ, ಅನುಮತಿ ಇಲ್ಲದೆ (ಅಂದರೆ ಸೂಕ್ತ ಸಂಭಾವನೆ ಪಾವತಿಸದೆ) ಇಳಯರಾಜ ನಿರ್ದೇಶನದ ಹಾಡುಗಳನ್ನು ಹಾಡಬಾರದು ಎಂದರೆ, ಬಹುತೇಕ ಇಳಯರಾಜ ಹಾಡುಗಳು ಸಾರ್ವಜನಿಕ ಸಂಗೀತ ಕಾರ್ಯಕ್ರಮಗಳಿಂದ ಮಾಯವಾಗಲಿಕ್ಕಿಲ್ಲವೆ? ಇದರಿಂದ ನಿಜಕ್ಕೂ ನಷ್ಟ ಯಾರಿಗೆ? ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65